**ವಿಷಯ ನಂ. 18:** ಸ್ವಚ್ಚ ಭಾರತ ಮಿಷನ್ ಎಸ್.ಡ್ಲ್ಯೂ.ಎಮ್ ಡಿ.ಪಿ.ಆರ್ ನಂತೆ ಘನತ್ಯಾಜ್ಯ ವಿಲೇವಾರಿ ಶುಲ್ಕಗಳ ಬೈಲಾ ರೂಪಿಸುವ ಕುರಿತು.

**ಠರಾವ ನಂ.:557:** ವಿಷಯದ ಕುರಿತು ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಈ ಕುರಿತು ಪರಿಸರ ಅಭಿಯಂತರರು ಸ್ವಚ್ಚ ಭಾರತ ಮಿಷನ್ ಎಸ್.ಡ್ಲ್ಯೂ.ಎಮ್ ಡಿ.ಪಿ.ಆರ್ ನಂತೆ ಘನತ್ಯಾಜ್ಯ ವಿಲೇವಾರಿ ಶುಲ್ಕಗಳ ಬೈಲಾ ರೂಪಿಸುವ ಕುರಿತು ಸರ್ಕಾರದ ಸುತ್ತೋಲೆಯನ್ನು ಮತ್ತು ಮಾನ್ಯ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ ಇವರ ಸಭಾನಿರ್ಣಯಗಳನ್ನು ಸಭೆಯಲ್ಲಿ ವಿವರವಾಗಿ ಓದಿ ಹೇಳಿದರು. ಅದರಂತೆ ಪುರಸಭೆ ಕುಮಟಾಕ್ಕೂ ಕೂಡಾ ಬೈಲಾ ಅಳವಡಿಸಿಕೊಳ್ಳುವುದು ಅತೀ ಅವಶ್ಯವಿರುವುದನ್ನು ಸಭೆಯ ಗಮನಕ್ಕೆ ತಂದರು. ಈಗಾಗಲೇ ಸ್ವಚ್ಛಭಾರತ ಮಿಷನ್ ಅಡಿಯಲ್ಲಿ ಐ.ಆರ್.ಜಿ ದೆಹಲಿ ಸಂಸ್ಥೆಯವರು ಮುಂದಿನ 5 ವರ್ಷಗಳ ತ್ಯಾಜ್ಯ ವಿಲೇವಾರಿಗಾಗಿ ರೂ. 435.07 ಲಕ್ಷಗಳಿಗೆ ವಿಸ್ತೃತ ಯೋಜನಾ ವರದಿಯನ್ನು ಸರಕಾರದ ಆದೇಶದಂತೆ ಸಿದ್ಧಪಡಿಸಿದ್ದು ಸದರಿ ಯೋಜನಾ ವರದಿಯು ಸರಕಾರದಿಂದ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಘನತ್ಯಾಜ್ಯ ವಿಲೇವಾರಿ ಯೋಜನಾ ವರದಿಯನ್ನು ಸಭೆಯ ಗಮನಕ್ಕೆ ತಂದು ಈ ಯೋಜನ ವರದಿಯಲ್ಲಿ ಸರಕಾರದ ನಿರ್ದೇಶನಗಳಂತೆ ತ್ಯಾಜ್ಯ ವಿಲೇವಾರಿಯ ಕುರಿತಂತೆ ಬಳಕೆದಾರ ಶುಲ್ಕ ನಿರ್ಧರಿಸುವಿಕೆ, ಘನತ್ಯಾಜ್ಯ ವಿಲೇವಾರಿ ನಿರ್ವಹಣೆಗಾಗಿ ಬಳಸಲಾಗುವ ವಾರ್ಷಿಕ ವೆಚ್ಚದಲ್ಲಿ ಶೇ.30 ರೊಂದ ಶೇ.50ರಷ್ಟು ಮೊತ್ತವನ್ನು ಬಳಕೆದಾರರ ಶುಲ್ಕ, ಗೊಬ್ಬರ ತಯಾರಿಕೆ ಮತ್ತು ಮರುಬಳಕೆ ಸಮಗ್ರಿಗಳ ಹರಾಜು ಇತ್ಯಾದಿಗಳಿಂದ ಸ್ಥಳೀಯ ಸಂಸ್ಥೆ ಮರುಭರಣ ಮಾಡಿಕೊಳ್ಳಲು ಕ್ರೀಯಾಯೋಜನೆ, ಖರೀದಿಸಬೇಕಾದ ವಾಹನ/ ಯಂತ್ರೋಪಕರಣಗಳ ವಿವರ, ಘನತ್ಯಾಜ್ಯ ವಿಲೇವಾರಿ ಘಟಕದ ಅಭಿವೃದ್ಧಿ ಕ್ರೀಯಾಯೋಜನೆ ಇತ್ಯಾದಿ ಸಮಗ್ರ ವಿವರಗಳನ್ನು ಸೇರಿಸಲಾಗಿದೆ. ಸದರಿ ಯೋಜನಾ ವರದಿಯಲ್ಲಿ ಇರುವ ಅಂಶಗಳನ್ನು ಸೇರಿಸಿಕೊಂಡು ಬೈಲಾ ರೂಪಿಸುವುದು ಘನತ್ಯಾಜ್ಯ ವಿಲೇವಾರಿ ನಿಯಮಗಳು 2016 ರ ಪ್ರಕಾರ ಸ್ಥಳೀಯ ಸಂಸ್ಥೆಗಳ ಕರ್ತವ್ಯವಾಗಿದ್ದು ಅದರಂತೆ ಈ ಕೆಳಗಿನ ಬೈಲಾ ರೂಪಿಸಲಾಗಿದೆ.

# ಪುರಸಭೆ ಕಾರ್ಯಾಲಯ, ಕುಮಟಾ

ಉತ್ತರಕನ್ನಡ ಜಿಲ್ಲೆ

**ಕರಡು ಅಧಿಸೂಚನೆ**

**ಕುಮಟಾ ಪುರಸಭೆ ಕೌನ್ಸಿಲ್ ನಿರ್ಣಯ , ದಿನಾಂಕ – –2018ರಂತೆ**

1. **ಚಿಕ್ಕ ಹೆಸರು ಮತ್ತು ಪ್ರಾರಂಭ**
   (1) ಈ ನಿಯಮಗಳನ್ನು ಘನತ್ಯಾಜ್ಯ ವಸ್ತು ವ್ಯವಸ್ಥಾಪನೆ ಉಪನಿಯಮಗಳು 2016 ಎಂದು ಕರೆಯತಕ್ಕದ್ದು.
   (2) ಈ ನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದ, ಅವು ಸರಕಾರ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಂದು ಜಾರಿಗೆ ಬರತಕ್ಕದ್ದು

2. **ಅನ್ವಯ**

ಈ ನಿಯಮಗಳು ಕೇಂದ್ರ ಸರಕಾರದ ಘನತ್ಯಾಜ್ಯ ವಸ್ತು ವ್ಯವಸ್ಥಾಪನೆ ನಿಯಮಗಳು 2016 ರಲ್ಲಿ ಸೂಚಿಸಿರುವ ಕುಮಟಾ ಪುರಸಭೆ ವ್ಯಾಪ್ತಿಯ ಘನತ್ಯಾಜ್ಯ (ಕೈಗಾರಿಕಾ ತ್ಯಾಜ್ಯ, ಅಪಾಯಕಾರಿ ತ್ಯಾಜ್ಯ, ಅಪಾಯಕಾರಿ ರಾಸಾಯನಿಕ ತ್ಯಾಜ್ಯ, ವೈದ್ಯಕೀಯ ತ್ಯಾಜ್ಯ, ಎಲೆಕ್ಟ್ರಾನಿಕ್ ತ್ಯಾಜ್ಯ, ಲೆಡ್ ಅಸಿಡ್ ಬ್ಯಾಟರಿ ತ್ಯಾಜ್ಯ ಮತ್ತು ವಿಕಿರಣ ಉತ್ಪಾದನಾ ತ್ಯಾಜ್ಯಗಳನ್ನು ಹೊರತು ಪಡಿಸಿ) ಉತ್ಪಾದಕರಿಗೆ ಅನ್ವಯವಾಗತಕ್ಕದ್ದು.

3. **ಪರಭಾಷೆಗಳು**

ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು ಕೇಂದ್ರ ಸರಕಾರದ ಘನತ್ಯಾಜ್ಯ ವಸ್ತು ವ್ಯವಸ್ಥಾಪನೆ ನಿಯಮಗಳು 2016 ರಲ್ಲಿನ ವಿವರಣೆಯಂತೆ ತಿಳಿಯತಕ್ಕದ್ದು.

4. **ತ್ಯಾಜ್ಯ ಉತ್ಪಾದಕನ ಕರ್ತವ್ಯಗಳು**

ಪ್ರತಿಯೊಬ್ಬ ತ್ಯಾಜ್ಯ ಉತ್ಪಾದಕನು ಕೇಂದ್ರ ಸರಕಾರದ ಘನತ್ಯಾಜ್ಯ ವಸ್ತು ವ್ಯವಸ್ಥಾಪನೆ ನಿಯಮಗಳು 2016 ರಲ್ಲಿ ಸೂಚಿಸಿರುವಂತೆ ಹಾಗೂ ಈ ಕೆಳಕಂಡ ರೀತಿಯಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯವನ್ನು ಕೊಳೆಯುವ (ಜೈವಿಕವಾಗಿ ವಿಘಟನೆ ಹೊಂದುವ, ಅನುಬಂಧ-1) ತ್ಯಾಜ್ಯ, ಕೊಳೆಯದ (ಒಣ ಮತ್ತು ಮರುಬಳಕೆ ಮಾಡಬಹುದಾದ) ಅನುಬಂಧ-2) ತ್ಯಾಜ್ಯ ಮತ್ತು ಗೃಹೋಪಯೋಗಿ ಅಪಾಯಕಾರಿ (ಅನುಬಂಧ-3) ತ್ಯಾಜ್ಯ ಎಂಬ ಮೂರು ಭಾಗಗಳನ್ನಾಗಿ ವಿಂಗಡಿಸಿ ಸಂಗ್ರಹಿಟ್ಟುಕೊಂಡು ಪುರಸಭೆಯು ಕಾಲಕಾಲಕ್ಕೆ ಸೂಚಿಸುವ ರೀತಿಯಲ್ಲಿ (ಅನುಬಂಧ-4) ತ್ಯಾಜ್ಯ ಸಂಗ್ರಹಕಾರರಿಗೆ ನೀಡತಕ್ಕದ್ದು.

**ಸ್ಯಾನಿಟರಿ/ಗೃಹೋತ್ಪತ್ತಿ ವೈದ್ಯಕೀಯ ತ್ಯಾಜ್ಯಗಳಾದ** ಡೈಪರ್, ಸಾನಿಟರಿ ಪ್ಯಾಡ್ ಮುಂತಾದ ತ್ಯಾಜ್ಯವನ್ನು ಅನುಬಂಧ-5 ರಂತೆ ವಿಲೇವಾರಿ ಮಾಡತಕ್ಕದ್ದು.

**ಉದ್ಯಾನ ಮತ್ತು ತೋಟಗಾರಿಕೆಯ ತ್ಯಾಜ್ಯ :** ಉದ್ಯಾನ ಮತ್ತು ತೋಟಗಾರಿಕೆಯ ತ್ಯಾಜ್ಯಗಳನ್ನು ಮೇಲೆ ತಿಳಿಸದ ತ್ಯಾಜ್ಯಗಳೊಡನೆ ಮಿಶ್ರಗೊಳಿಸದೆ ಮೂಲದಲ್ಲಿಯೆ ಮಾರುಕಟ್ಟೆಯಲ್ಲಿ ಲಭ್ಯವಿರುವ ವಿಷಯ ಪರಿಣಿತ ಸಮಾಲೋಚಕರ ಸಹಾಯ ಪಡೆದು ತರೆಗೆಲೆ ಗೊಬ್ಬರವನ್ನಾಗಿ ಪರಿವರ್ತಿಸಿ ಗಿಡ ಮರಗಳಿಗೆ ಬಳಸುವುದು ಅಥವಾ ಪುರಸಭೆಯು ಕಾಲಕಾಲಕ್ಕೆ ಮರ ಸವರುವಿಕೆ ಮತ್ತು ಮರ ಸವರುವಿಕೆಯ ತ್ಯಾಜ್ಯಗಳನ್ನು ಸಂಗ್ರಹಿಸುವ ಮತ್ತು ವಿಲೇವಾರಿ ಮಾಡುವ, ಸಂಗ್ರಹಣೆ ಮಾಡಲು ನಿಗಧಿಪಡಿಸಲಾದ ಸಮಯವೂ ಸೇರಿದಂತೆ ಸೂಚನೆ/ಮಾರ್ಗದರ್ಶನಗಳ ರೀತ್ಯಾ ವಿಲೇಗೊಳಿಸುವುದು.

**<u>ಕೆಲವು ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ಈ ಕೆಳಗಿನ ನಿರ್ದಿಷ್ಟ ಕಡ್ಡಾಯ ಜವಾಬ್ದಾರಿಗಳನ್ನು ಆದೇಶಿಸಲಾಗಿದೆ.</u>**

**4.1 ಕೋಳಿ, ಮೀನು ಮತ್ತು ಕಸಾಯಿಖಾನೆಯ ತ್ಯಾಜ್ಯ (ಸೂಚಿತ ಕಸಾಯಿಖಾನೆ ಮತ್ತು ಮಾರುಕಟ್ಟೆಗಳನ್ನು ಹೊರತುಪಡಿಸಿ, ಎಲ್ಲಾ ಪ್ರದೇಶಗಳಿಂದ)**

**4.1.1** ಪುರಸಭೆ ವ್ಯಾಪ್ತಿಯ ವಿವಿಧ ಪ್ರದೇಶಗಳಲ್ಲಿ ಮಾಂಸ/ಮೀನು/ಇನ್ನಾವುದೇ ಪ್ರಾಣಿ /ಪಕ್ಷಿ ಜನ್ಯ ಉತ್ಪನ್ನಗಳನ್ನು ಮಾರುವವರು ಆವರಣಗಳನ್ನು ಸ್ವಚ್ಛವಾಗಿ ಇರಿಸಿಕೊಳ್ಳತಕ್ಕದ್ದು.

**4.1.2** ಸೂಚಿತ ಕಸಾಯಿಖಾನೆ ಮತ್ತು ಮಾರುಕಟ್ಟೆಗಳನ್ನು ಹೊರತುಪಡಿಸಿ ಯಾವುದೇ ವಾಣಿಜ್ಯ ಚಟುವಟಿಕೆಯ ಪರಿಣಾಮವಾಗಿ ಕೋಳಿ, ಮೀನು ಮತ್ತು ಕಸಾಯಿಖಾನೆ ತ್ಯಾಜ್ಯ ಉತ್ಪಾದಿಸುವ ಯಾವುದೇ ಮಾಲೀಕ / ಅನುಭವದಾರರು ಆ ತ್ಯಾಜ್ಯದಲ್ಲಿ ಪುಕ್ಕ ಮತ್ತು ತಲೆಗಳನ್ನು ಕೆಂಪು ಬಕೆಟ್ ನಲ್ಲಿ ಸಂಗ್ರಹಿಸಿ, ಕರುಳು ಹಾಗೂ ಇತರೆ ಕೊಳೆಯುವ ಭಾಗಗಳನ್ನು ಹಸಿರು ಬಕೆಟ್ ಗಳಲ್ಲಿ ಸಂಗ್ರಹಿಸಿ ಪುರಸಭೆಯು ನಿಗಧಿಪಡಿಸಿರುವ ವಾಹನಕ್ಕೆ ನಿಗಧಿತ ಸಮಯದಲ್ಲಿ ನೀಡುವುದು. ಈ ರೀತಿಯ ತ್ಯಾಜ್ಯವನ್ನು ಯಾವುದೇ ಸಮುದಾಯ ತ್ಯಾಜ್ಯ ತೊಟ್ಟಿಗಳಲ್ಲಿ ಅಥವಾ ಸಾರ್ವಜನಿಕ/ಖಾಸಗಿ ಸ್ಥಳದಲ್ಲಿ ಸುರಿಯುವುದು/ಹಾಕುವುದು ನಿಷೇಧಿಸಲಾಗಿದೆ ಮತ್ತು ಹೀಗೆ ಮಾಡಿದ್ದಲ್ಲಿ ದಂಡದ ಅನುಬಂಧದಲ್ಲಿ ತೋರಿಸಿದಂತೆ ದಂಡ ವಿಧಿಸಲಾಗುವುದು. ಈ ಮಾಂಸ ಮತ್ತು ಮೀನಿನ ತ್ಯಾಜ್ಯವನ್ನು ಮಣ್ಣಿನ ಮಡಿಕೆ ಉಪಯೋಗಿಸಿ ಕಾಂಪೋಸ್ಟ್ ತಯಾರಿಸಿ ಕೃಷಿಕರಿಗೆ ನೀಡಲಾಗುವುದು.

**4.2 ಎಲ್ಲಾ ಮಾರಾಟಗಾರರು/ತಿರುಗು ವ್ಯಾಪಾರಿಗಳು :** ತಮ್ಮ ವ್ಯಾಪಾರದಿಂದ ಉತ್ಪತ್ತಿಯಾಗುವ ಯಾವುದೇ ಜೈವಿಕ
ವಿಘಟನೀಯ ಇತರೆ ಮತ್ತು ತ್ಯಾಜ್ಯವನ್ನು ಬೆರೆಸದೆ ಅದೇ ಪ್ರದೇಶಗಳಲ್ಲಿ ನಗರ ಸ್ಥಳೀಯ ಸಂಸ್ಥೆಯು ಒದಗಿಸಿರುವ ಅಥವಾ ತಮ್ಮದೇ ಸಂಗ್ರಹಣಾ ಕಂಟೈನರ್ ತೊಟ್ಟಿಗಳಲ್ಲಿ ಹಸಿ ಕಸ (ಹಸಿರು ಬಕೆಟ್) ಮತ್ತು ಒಣ ಕಸ (ನೀಲಿ ಬಕೆಟ್) ವನ್ನಾಗಿ ವಿಂಗಡಿಸಿ ಇರಿಸಿಕೊಳ್ಳುವುದು. ಈ ರೀತಿ ಸರಿಯಾಗಿ ಪ್ರತ್ಯೇಕಿಸಲಾದ ತ್ಯಾಜ್ಯವನ್ನು ಪುರಸಭೆಯ ವಾಹನಕ್ಕೆ ನೀಡುವ ಜವಾಬ್ದಾರಿ ತ್ಯಾಜ್ಯ ಉತ್ಪಾದಕರ/ಮಾರಾಟಗಾರರದ್ದಾಗಿರುತ್ತದೆ. ಹೀಗೆ ಮಾಡಲು ವಿಫಲವಾದಲ್ಲಿ ಅಂತಹವರಿಗೆ ದಂಡದ ಅನುಬಂಧದಲ್ಲಿ ತೋರಿಸಿದಂತೆ ದಂಡ ವಿಧಿಸಲಾಗುವುದು. ಸ್ವಚ್ಛ ಅಂಗಳವನ್ನು ನಿರ್ವಹಿಸುವ ಜವಾಬ್ದಾರಿ ಪ್ರತಿಯೊಬ್ಬ ಮಾರಾಟಗಾರ/ತಿರುಗು ವ್ಯಾಪಾರಿಯ ಜವಾಬ್ದಾರಿಯಾಗಿರುತ್ತದೆ.

**4.3 ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ : ಅಪಜೀ 17 ಇಪಿಸಿ 2012 ದಿನಾಂಕ 11-03-2016 ರಂತೆ ನಿಷೇಧಿತ ಪ್ಲಾಸ್ಟಿಕ್ ಚೀಲ/ವಸ್ತುಗಳ ಮಾರಾಟ ಯಾ ಬಳಕೆ ಮಾಡುತ್ತಿದ್ದಲ್ಲಿ** ಅನುಬಂಧದಲ್ಲಿ ತೋರಿಸಿದಂತೆ ದಂಡ ತೆರಬೇಕಾಗುವುದು.

**5. ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕುವುದು ಮತ್ತು ಇತರ ತೊಂದರೆಗಳನ್ನು ನಿಷೇಧಿಸುವುದು**

**5.1 ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಕಸ ಹಾಕುವುದು:** ಯಾವುದೇ ವ್ಯಕ್ತಿ ನಿಗಧಿತ ಸಾರ್ವಜನಿಕ ಅಥವಾ ಖಾಸಗಿ ಕಸದ ಬುಟ್ಟಿ/ತೊಟ್ಟಿಗಳನ್ನು ಹೊರತುಪಡಿಸಿ ಉಳಿದ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಕಸ ಹಾಕುವಂತಿಲ್ಲ ಅಥವಾ ಎಸೆಯುವಂತಿಲ್ಲ. ಕಸವನ್ನು ಹಸಿ ಕಸ (ಹಸಿರು ಬಕೆಟ್), ಒಣ ಕಸ (ಕೆಂಪು ಬಕೆಟ್) ಮತ್ತು ಅಪಾಯಕಾರಿ ಕಸವನ್ನಾಗಿ ಬೇರ್ಪಡಿಸಿ ಪ್ರತ್ಯೇಕ ಬುಟ್ಟಿಗಳಲ್ಲಿ ಸಂಗ್ರಹಿಸುವುದು.

**5.2 ಯಾವುದೇ ಖಾಸಗಿ ಸ್ಥಳದಲ್ಲಿ/ಜಾಗದಲ್ಲಿ/ಪ್ರದೇಶಗಳಲ್ಲಿ ಕಸ ಹಾಕುವುದು:-** ಯಾವುದೇ ವ್ಯಕ್ತಿ ನಿಗಧಿತ ಸಾರ್ವಜನಿಕ ಅಥವಾ ಖಾಸಗಿ ಕಸದ ಬುಟ್ಟಿ/ತೊಟ್ಟಿಗಳನ್ನು ಹೊರತುಪಡಿಸಿ ವಾಸವಿರುವ ಮುಕ್ತ ಅಥವಾ ಖಾಲಿ ಸಾರ್ವಜನಿಕ/ಖಾಸಗಿ ಸ್ವತ್ತಿನಲ್ಲಿ ಆ ವ್ಯಕ್ತಿ ವಾಸವಿರಲಿ ಅಥವಾ ವಾಸವಿಲ್ಲದಿರಲಿ ಕಸ ಹಾಕುವಂತಿಲ್ಲ ಅಥವಾ ಎಸೆಯುವಂತಿಲ್ಲ.

**5.3 ವಾಹನಗಳಿಂದ ಕಸ ಎಸೆಯುವುದು:-** ವಾಹನ ಚಾಲಕನಾಗಲಿ ಅಥವಾ ಪ್ರಯಾಣಿಕರಾಗಲಿ ಯಾವುದೇ ಬೀದಿ, ರಸ್ತೆ, ಪಾದಚಾರಿ ಹಾದಿ, ಆಟದ ಮೈದಾನ, ಉದ್ಯಾನ ಅಥವಾ ಇತರ ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕುವಂತಿಲ್ಲ ಅಥವಾ ಎಸೆಯುವಂತಿಲ್ಲ.

**5.4 ಸಾರ್ವಜನಿಕ ತೊಂದರೆ ಉಂಟು ಮಾಡುವುದು:-** ಯಾವುದೇ ವ್ಯಕ್ತಿ, ನಿರ್ದಿಷ್ಟವಾದ ಅನುಕೂಲಕ್ಕಾಗಿ ಒದಗಿಸಿದ ಸಾರ್ವಜನಿಕ ಸೌಲಭ್ಯಗಳನ್ನು ಹೊರತುಪಡಿಸಿ ಬೇರೆ ಸ್ಥಳಗಳಲ್ಲಿ ಸ್ನಾನ ಮಾಡುವುದು. ಉಗಿಯುವುದು, ಮಲಮೂತ್ರ ವಿಸರ್ಜಿಸುವುದು, ಪ್ರಾಣಿ ಅಥವಾ ಪಕ್ಷಿಗಳಿಗೆ ಆಹಾರ/ನೀರುಣಿಸುವುದು. ವಾಹನ ಪಾತ್ರೆಗಳನ್ನು ತೊಳೆಯುವುದು/ದುರಸ್ಥಿ ಮುಂತಾದವುಗಳನ್ನು ಮಾಡುವಂತಿಲ್ಲ ಅಥವಾ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಯಾವುದೇ ರೀತಿಯ ಶೇಖರಣೆ ಮಾಡುವಂತಿಲ್ಲ.

**5.5 ಸಾಕಿದ/ಒಡೆತನದ ಪ್ರಾಣಿಗಳ ಕಸ ಅಥವಾ ಗಲೀಜು:-** ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಸಾಕು
ಪ್ರಾಣಿಯು ಗಲೀಜು ಮಾಡಿದಲ್ಲಿ ಅದನ್ನು ತೆಗೆಯುವ /ಸ್ವಚ್ಛಗೊಳಿಸುವ ಜವಾಬ್ದಾರಿ ಅವುಗಳ ಮಾಲೀಕರದ್ದೇ ಆಗಿರುತ್ತದೆ ಮತ್ತು ಅಂತಹ ತ್ಯಾಜ್ಯವನ್ನು ಸಾಧ್ಯವಾದಷ್ಟು ಮಟ್ಟಿಗೆ ತಮ್ಮದೇ ಸ್ಥಳ ಅಥವಾ ಒಳಚರಂಡಿ ವ್ಯವಸ್ಥೆಯ ಮೂಲಕ ಹೊರಹಾಕುವುದಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು. ಹೀಗೆ ಮಾಡಲು ವಿಫಲವಾದಲ್ಲಿ ಅಂತಹವರಿಗೆ ದಂಡದ ಅನುಬಂಧದಲ್ಲಿ ತೋರಿಸಿದಂತೆ ದಂಡ ವಿಧಿಸಲಾಗುವುದು.

**5.6 ಸ್ವಚ್ಛ ಆವರಣ ಖಾತ್ರಿಪಡಿಸುವುದು :-** ಪ್ರತಿ ವ್ಯಕ್ತಿಯೂ ತನಗೆ ಸೇರಿದ ಅಥವಾ ವಾಸವಿರುವ ಯಾವುದೇ ಸ್ಥಳದ ಆವರಣದ ಮುಂದಿರುವ ಅಥವಾ ಹೊಂದಿಕೊಂಡಂತಿರುವ ಸಾರ್ವಜನಿಕ ಸ್ಥಳ, ಅಂಗಡಿಗಳ ಮುಂದೆ, ಪಾದಚಾರಿ ರಸ್ತೆ ಮತ್ತು ತೆರೆದ ಚರಂಡಿ/ ಗಟಾರ ಇತ್ಯಾದಿ ಯಾವುದೇ ಘನ ಅಥವಾ ದ್ರವ ತ್ಯಾಜ್ಯವನ್ನು ಹಾಕುವಂತಿಲ್ಲ.

6. **ಸಾರ್ವಜನಿಕ ಸಭೆ ಮತ್ತು ಇತರೆ ಕಾರ್ಯಕ್ರಮಗಳಿಂದ ಉತ್ಪಾದನೆಯಾಗುವ ತ್ಯಾಜ್ಯ:**

6.1 **ಸಾರ್ವಜನಿಕ ಸಭೆ ಮತ್ತು ಕಾರ್ಯಕ್ರಮ ಆಯೋಜನೆ ಬಗ್ಗೆ:** ಸಾರ್ವಜನಿಕ ಸ್ಥಳಗಳಲ್ಲಿ ನಡೆಯುವ ಸಾರ್ವಜನಿಕ ಸಭೆ ಮತ್ತು ಕಾರ್ಯಕ್ರಮಗಳನ್ನು (ಮೆರವಣಿಗೆ ಪ್ರದರ್ಶನ, ಸರ್ಕಸ್, ಮೇಳ ರಾಜಕೀಯ, ಸಮಾವೇಶ ವಾಣಿಜ್ಯ, ಧಾರ್ಮಿಕ, ಸಾಮಾಜಿಕ–ಸಾಂಸ್ಕೃತಿಕ ಕಾರ್ಯಕ್ರಮ, ಪ್ರತಿಭಟನೆ ಮತ್ತು ಪ್ರದರ್ಶನ ಇತ್ಯಾದಿಗಳು ಸೇರಿದಂತೆ) ನಡೆಸಲು ಪೋಲೀಸ್ ಮತ್ತು ಪುರಸಭೆಯ ಅನುಮತಿಯ ಅಗತ್ಯವಿದೆ. ಈ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸಿದವರು ಅಥವಾ ಸಭೆ ಸೇರಿದವರು ಹಸಿ ಕಸ (ಹಸಿರು ಬಕೆಟ್) ಮತ್ತು ಒಣಕಸ (ನೀಲಿ ಬಕೆಟ್) ವನ್ನು ಪ್ರತ್ಯೇಕ, ಪ್ರತ್ಯೇಕವಾಗಿ ದೊಡ್ಡ ಡ್ರಮ್ ಗಳಲ್ಲಿ ಸಂಗ್ರಹಿಸುವ ಮೂಲಕ ಆ ಸ್ಥಳ ಮತ್ತು ಅದರ ಸುತ್ತಮುತ್ತಲಿನ ಪ್ರದೇಶದ ಶುಚಿತ್ವವನ್ನು ಕಾಪಾಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಮದುವೆ ಸಮಾರಂಭ/ಕಲ್ಯಾಣ ಮಂಟಪದಲ್ಲಿ ಪ್ಲಾಸ್ಟಿಕ್ ಶೀಟ್, ಪ್ಲಾಸ್ಟಿಕ್ ಲೋಟ, ಪ್ಲಾಸ್ಟಿಕ್ ಕಪ್ ಬಳಕೆ ನಿಷೇಧಿಸಲಾಗಿದ್ದು, ಸಮಾರಂಭದಲ್ಲಿನ ತ್ಯಾಜ್ಯ ವಸ್ತುಗಳನ್ನು ಒಣಕಸ (ನೀಲಿ ಡ್ರಮ್) ಮತ್ತು ಹಸಿ ಕಸ (ಬಾಳೆ ಎಲೆ ಮತ್ತು ಉಳಿದ ತ್ಯಾಜ್ಯ ಆಹಾರ ಪದಾರ್ಥವನ್ನು ಪ್ರತ್ಯೇಕ, ಪ್ರತ್ಯೇಕವಾಗಿ ಹಸಿರು ಡ್ರಮ್ ಗಳಲ್ಲಿ) ವನ್ನು ಪ್ರತ್ಯೇಕವಾಗಿ ಸಂಗ್ರಹಿಸಿದಲ್ಲಿ ನಿಗಧಿತ ಸಮಯದಲ್ಲಿ ಪುರಸಭಾ ವತಿಯಿಂದ ತ್ಯಾಜ್ಯವನ್ನು ಸಂಗ್ರಹಿಸಲಾಗುವುದು. ಈ ರೀತಿ ಮಾಡಿದಲ್ಲಿ ಉಳಿದ ತ್ಯಾಜ್ಯ ಆಹಾರವನ್ನು ಪ್ರಾಣಿಗಳಿಗೆ, ಬಾಳೆ ಎಲೆಗಳನ್ನು ಹಸುಗಳಿಗೆ ನೀಡಲಾಗುವುದು.

6.2 **ಮರುಪಾವತಿಸಬಹುದಾದ ಶುಚಿತ್ವ ಠೇವಣಿ:** ಪುರಸಭೆಯು ಕಾರ್ಯಕ್ರಮವನ್ನು ಆಯೋಜಿಸುವವರಿಂದ ಕಾರ್ಯಕ್ರಮದ ಅವಧಿಗೆ ಮರುಪಾವತಿಸಬಹುದಾದ ಶುಚಿತ್ವ ಠೇವಣಿಯನ್ನು ಕಟ್ಟಿಸಿಕೊಳ್ಳಲಾಗುವುದು. ಕಾರ್ಯಕ್ರಮ ಮುಗಿದ ನಂತರ ಕಾರ್ಯಕ್ರಮವನ್ನು ಆಯೋಜಿಸಲಾದ ಸಾರ್ವಜನಿಕ ಸ್ಥಳದ ಸ್ವಚ್ಛತೆಯನ್ನು ನೋಡಿ ಮತ್ತು ಆ ಕಾರ್ಯಕ್ರಮದಲ್ಲಿ ಉತ್ಪತ್ತಿಯಾದ ತ್ಯಾಜ್ಯವನ್ನು ಈ ಉಪನಿಯಮಗಳ ಕ್ರಮ ಸಂಖ್ಯೆ 4.0 ರಲ್ಲಿ ತಿಳಿಸಿದಂತೆ ವಿಂಗಡನೆ ಮಾಡಿ ಸಂಗ್ರಹಿಸಿ ವಿಲೇವಾರಿ ಶುಲ್ಕವನ್ನು ಪುರಸಭೆಗೆ ಪಾವತಿಸಿ ನಿಗಧಿಪಡಿಸಲಾದ ಸ್ಥಳಕ್ಕೆ ಸಾಗಿಸಿರುವುದನ್ನು ಗಮನಿಸಿದ ನಂತರವಷ್ಟೇ ಈ ಠೇವಣಿಯನ್ನು ಮರು ಪಾವತಿಸಲಾಗುವುದು( ಈ ಠೇವಣಿಯು ಸಾರ್ವಜನಿಕ ಸ್ಥಳದ ಶುಚಿತ್ವಕ್ಕಾಗಿ ಮಾತ್ರ, ಇದು ಆಸ್ತಿಯ ಯಾವುದೇ ರೀತಿಯ ಹಾನಿಗಾಗಿ ಅಲ್ಲ).

7 **ಘನತ್ಯಾಜ್ಯ ಸಂಗ್ರಹಣೆ:** ಪುರಸಭೆ ವತಿಯಿಂದ ಮೇಲೆ ತಿಳಿಸಿದ ರೀತಿಯಲ್ಲಿ ಕಸವನ್ನು ಹಸಿ ಕಸ (ಹಸಿರು ಬಕೆಟ್), ಒಣ ಕಸ (ನೀಲಿ ಬಕೆಟ್) ಮತ್ತು ಅಪಾಯಕಾರಿ ತ್ಯಾಜ್ಯವನ್ನಾಗಿ ವಿಂಗಡಿಸಿ ಸಂಗ್ರಹಿಸುವುದು ಹಾಗೂ ಶೇಖರಿಸಿಟ್ಟ ತ್ಯಾಜ್ಯವನ್ನು ಉತ್ಪಾದಕರೇ ಪುರಸಭೆಯು ನಿಗಧಿಪಡಿಸಿದ ಸಾರ್ವಜನಿಕ ಅಥವಾ ಖಾಸಗಿ ಪಿಕ್ ಅಪ್ ಪಾಯಿಂಟ್ ವರೆಗೆ ತ್ಯಾಜ್ಯವನ್ನು ತಂದು ಪುರಸಭೆಯು ಒದಗಿಸಿರುವ ನಿಗಧಿತ ಗಂಟೆ ಸದ್ದು ಮಾಡುವ ವಾಹನಗಳಿಗೆ ನೀಡುವುದು. ಮಾರ್ಗ ಯೋಜನೆಯನ್ನು ಆಧರಿಸಿ ಪುರಸಭೆಯು ಪಾಯಿಂಟು ಟು ಪಾಯಿಂಟ್ ತ್ಯಾಜ್ಯ ಸಂಗ್ರಹಣೆಗಾಗಿ ವಾಹನಗಳ ಸೇವೆಯನ್ನು ಒದಗಿಸುತ್ತದೆ ಮತ್ತು ಈ ರೀತಿಯಾದ ಮಾರ್ಗ ಯೋಜನೆಗಳನ್ನು ಮುಂಚಿತವಾಗಿಯೇ ಸೂಚನೆಗಳ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗುವುದು.

8 **ಒಣ ತ್ಯಾಜ್ಯ ಸಂಗ್ರಹಿಸುವ/ ಬೇರ್ಪಡಿಸುವ ಕೇಂದ್ರಗಳು:–** ಪುರಸಭೆಯು ಮರುಬಳಕೆ ಮಾಡಬಹುದಾದ ಮತ್ತು ಮರುಬಳಕೆ ಮಾಡಲಾಗದ ತ್ಯಾಜ್ಯಗಳನ್ನು ಬೇರ್ಪಡಿಸುವ ಪ್ರಕ್ರಿಯೆಯನ್ನು ಅನುಕೂಲ ಮಾಡುವ ಮತ್ತು ಸುಗಮಗೊಳಿಸುವ ಸಲುವಾಗಿ ಅಗತ್ಯವಿರುವ ಸಂಖ್ಯೆಯಲ್ಲಿ ಒಣತ್ಯಾಜ್ಯವನ್ನು ಸಂಗ್ರಹಿಸಿ ಶೇಖರಿಸಿಡುವ ಮತ್ತು ಬೇರ್ಪಡಿಸುವ ಕೇಂದ್ರಗಳನ್ನು ಸ್ಥಾಪಿಸುವುದು. ಈ ಒಣ ತ್ಯಾಜ್ಯ ಕೇಂದ್ರಗಳನ್ನು ಪುರಸಭೆಯು ಸ್ವತ್ತಿನಲ್ಲಿ/ಲಭ್ಯವಿರುವ ಸರ್ಕಾರ ಅಥವಾ ಇತರೆ ಸಂಸ್ಥೆಗಳಿಗೆ ಸೇರಿದ ಸ್ವತ್ತಿನಲ್ಲಿ ಅಥವಾ ಸೂಕ್ತ ಸಾರ್ವಜನಿಕ ಸ್ಥಳಗಳಲ್ಲಿ ಒದಗಿಸಿದ ಕಿಯಾಸ್ಕ್/ಶೆಡ್‌ಗಳಲ್ಲಿ ತೆರೆಯಲಾಗುವುದು ಮತ್ತು ನೋಂದಾಯಿತ ಚಿಂದಿ ಆಯುವವರು/ ಸಹಕಾರಿ ಸಂಘಗಳು/ ಪುರಸಭೆಯು ನಿರ್ದೇಶಿಸಿರುವ /ನೇಮಿಸಿರುವ ಪರವಾನಗಿ ಪಡೆದ ಇತರೆ ಯಾವುದೇ ನಿಯೋಗಿಯು ಇವುಗಳನ್ನು ನಿರ್ವಹಿಸಲಿದ್ದಾರೆ. ತ್ಯಾಜ್ಯವನ್ನು ಬೇರ್ಪಡಿಸಿ ನಂತರ ಉಳಿದ ಮರುಬಳಕೆ ಮಾಡಲಾಗದ ತ್ಯಾಜ್ಯವನ್ನು ಮತ್ತಷ್ಟು ಸಂಸ್ಕರಣೆ ಮಾಡಲು ಅಥವಾ ನೆಲ ಭರ್ತಿ ಮಾಡಲು ಸಮಯದಿಂದ ಸಮಯಕ್ಕೆ ತ್ಯಾಜ್ಯ ವಿಲೇವಾರಿ ಸ್ಥಳಗಳಿಗೆ ರವಾನೆ ಮಾಡಲಾಗುವುದು. ವಿವಿಧ ರೀತಿಯ ತ್ಯಾಜ್ಯ ಖರೀದಿ ಮತ್ತು ಮಾರಾಟ ಸೌಲಭ್ಯಗಳನ್ನು ಒಣ ತ್ಯಾಜ್ಯ ಬೇರ್ಪಡಿಸುವ ಕೇಂದ್ರಗಳಲ್ಲಿ ಸೂಚಿತ ನಿಗಧಿತ ಬೆಲೆಯಲ್ಲಿ ಮಾರುವುದನ್ನು ಮುಖ್ಯಾಧಿಕಾರಿಯವರು ಪರಿಗಣಿಸಬಹುದಾಗಿರುತ್ತದೆ.

9 **ತಪಾಸಣೆಗಳು:–** ಈ ನಿಯಮಗಳನ್ನು ಪಾಲಿಸುವುದನ್ನು ಹಾಗೂ ಪ್ರೋತ್ಸಾಹಿಸುವ ದೃಷ್ಠಿಯಿಂದ ಮುಖ್ಯಾಧಿಕಾರಿಯವರು ಅಥವಾ ಅವರಿಂದ ಅಧಿಕಾರ ಪಡೆದವರು ತಮ್ಮ ಮುನ್ಸಿಪಾಲ್ ವ್ಯಾಪ್ತಿಯ ವಿವಿಧ ಭಾಗಗಳಲ್ಲಿ ಅನಿರೀಕ್ಷಿತ ತಪಾಸಣೆಯನ್ನು ನಡೆಸುವರು. ಸದರಿ ಸಮಯದಲ್ಲಿ ಯಾವುದೇ ನಿಯಮಗಳನ್ನು ಸಾರ್ವಜನಿಕರು ಅನುಸರಿಸದಿದ್ದಲ್ಲಿ ದಂಡ ತೆರಬೇಕಾಗುತ್ತದೆ.

10 **ಪ್ರತಿ ವಾರ್ಡಿನಲ್ಲಿ ಜಾರಿ ದಳಗಳು :** ಪುರಸಭೆಯು ಸಮರ್ಪಕ ಘನತ್ಯಾಜ್ಯ ವಸ್ತು ನಿರ್ವಹಣೆಯನ್ನು ಖಾತ್ರಿ ಪಡಿಸಿಕೊಳ್ಳುವ ಸಲುವಾಗಿ 'ತ್ಯಾಜ್ಯ ನಿರ್ವಹಣೆ ಕಾವಲು ದಳವನ್ನು' ಸ್ಥಾಪಿಸಬಹುದು. ಸದರಿ ದಳವು ನಿಯಮಾವಳಿಗಳ ಉಲ್ಲಂಘನೆ ಮಾಡಿದ ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ಸ್ಥಳದಲ್ಲಿಯೇ ದಂಡವನ್ನು ವಿಧಿಸಬಹುದು/ ಅಥವಾ ಶಿಸ್ತು ಕ್ರಮ ತೆಗೆದುಕೊಳ್ಳಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಬಹುದು.

11 **ಘನತ್ಯಾಜ್ಯ ಶುಲ್ಕ:** (ಅನುಬಂಧ 6) ರ ಪ್ರಕಾರ ಪುರಸಭೆ ತನ್ನ ಸಾಮಾನ್ಯ ಸಭೆ ಠರಾವು ಸಂಖ್ಯೆ ದಿ: ರಂತೆ ನಿರ್ಣಯನಿಗಧಿಪಡಿಸಿದ ಘನತ್ಯಾಜ್ಯ ಶುಲ್ಕವನ್ನು ವಿಧಿಸಲಾಗುವುದು.

12 **ಈ ಉಪಕಾನೂನುಗಳನ್ನು ಉಲ್ಲಂಘಿಸಿದಲ್ಲಿ ವಿಧಿಸಲಾಗುವ ದಂಡ**

(ಅ) ಈ ಉಪಕಾನೂನುಗಳು ಜಾರಿಗೆ ಬಂದ ದಿನಾಂಕದಿಂದ ನಂತರದ 30 ದಿನಗಳವರೆಗೆ ಎಚ್ಚರಿಕೆ ಅವಧಿಯಾಗಿರುತ್ತದೆ.

ನಂತರ ಯಾವುದೇ ರೀತಿಯಲ್ಲಿ ಈ ಉಪಕಾನೂನುಗಳನ್ನು ಉಲ್ಲಂಘಿಸಿದಲ್ಲಿ ಪ್ರತಿ ಉಲ್ಲಂಘನೆಯ ನಿದರ್ಶನಕ್ಕಾಗಿ ದಂಡ ಪಟ್ಟಿಯ (ಅನುಬಂಧ 6) ರ ಪ್ರಕಾರ ದಂಡ ವಿಧಿಸುವುದರ ಜೊತೆಗೆ ಶಿಕ್ಷೆಗೊಳಗಾಗಬೇಕಾಗಬಹುದು.

ತ್ಯಾಜ್ಯ ಉತ್ಪಾದಕ ಯಾವುದೇ ಉಪಕಾನೂನನ್ನು ಮತ್ತೊಮ್ಮೆ ಉಲ್ಲಂಘಿಸಿದ್ದು ಕಂಡುಬಂದಲ್ಲಿ ದಂಡದ ಪ್ರಮಾಣ ದ್ವಿಗುಣವಾಗುತ್ತದೆ.

(ಆ) ಯಾವುದೇ ವ್ಯಕ್ತಿ ಅಥವಾ ಉತ್ಪಾದಕ ಈ ಉಪಕಾನೂನುಗಳನ್ನು ಉಲ್ಲಂಘಿಸಿದ ನಂತರ ಅನುಬಂಧ 6ರಲ್ಲಿ ನಿಗಧಿಪಡಿಸಿರುವಂತೆ ದಂಡಶುಲ್ಕವನ್ನು ಪಾವತಿಸದಿದ್ದಲ್ಲಿ ಆ ದಂಡದ ಹಣವನ್ನು ಆಸ್ತಿ ತೆರಿಗೆಯ ಉಳಿಕೆಯಿಂದ ಸಂಗ್ರಹಿಸಲಾಗುವುದು ಮತ್ತು ಅವರ ಮೇಲೆ ಕಾನೂನಿನನ್ವಯ ಮೊಕದ್ದಮೆ ದಾಖಲಿಸಲಾಗುವುದು.

## ಅನುಬಂಧ-1

### ಕೊಳೆಯುವ ಅಥವಾ ಜೈವಿಕವಾಗಿ ವಿಘಟನೆ ಹೊಂದುವ ತ್ಯಾಜಗಳು

ತರಕಾರಿ ಸಿಪ್ಪೆ, ಹಣ್ಣಿನ ಸಿಪ್ಪೆ, ಕೊಳೆತ ತರಕಾರಿ/ಕೊಳೆತ ಹಣ್ಣು, ಮಾವಿನ ಹಣ್ಣಿನ ಗೊರಟು, ಉಪಯೋಗಿಸಿದ ಚಹದ ಬ್ಯಾಗ್‌ಗಳು, ಕಾಫಿ ಪುಡಿ, ಮೊಟ್ಟೆಯ ಸಿಪ್ಪೆ, ಹೂ/ಎಲೆಗಳು, ಹಾಳಾದ ಸಾಂಬಾರ ಪದಾರ್ಥಗಳು, ಕಸಗುಡಿಸಿದ ನೆಲದ ಧೂಳು, ಕೂದಲು, ಮಾಂಸ ಮತ್ತು ಉಳಿದ ಮಾಂಸದ ತುಣುಕುಗಳು, ಕೊಳೆತ ಮೊಟ್ಟೆ, ಮೂಳೆ, ಅವಧಿ ಮುಗಿದ ಆಹಾರ ಪದಾರ್ಥಗಳು ( ಬ್ರೆಡ್ ಬಿಸ್ಕೇಟ್ಸ್, ಸಿದ್ಧ ಆಹಾರ), ಬೆರಳಿನ ಉಗುರುಗಳು, ಉಳಿದಿರುವ ಆಹಾರ ಪದಾರ್ಥ, ತೆಂಗಿನಕಾಯಿಯ ಕೆರಟ, ತೆಂಗಿನ ನಾರು, ಬೊಂಡ ಮುಂತಾದವುಗಳು.

## ಅನುಬಂಧ-2

### ಕೊಳೆಯದ ಅಥವಾ ಒಣ ಮತ್ತು ಮರುಬಳಕೆ ಮಾಡಬಹುದಾದ ತ್ಯಾಜ್ಯಗಳು

ಹಾಲು, ಮೊಸರಿನ ಪ್ಯಾಕ್‌ಗಳು, ಬೆಣ್ಣೆ ಕಟ್ಟಲು ಬಳಸಲಾಗುವ ಪೇಪರ್, ತುಪ್ಪ/ಎಣ್ಣೆ ಪ್ಯಾಕ್‌ಗಳು, ಎಣ್ಣೆ ಕ್ಯಾನುಗಳು, ಸುಗಂಧ ದ್ರವ್ಯದ ಹಾಗೂ ಶ್ಯಾಂಪು ಬಾಟಲಿಗಳು, ಟೆಟ್ರಾ ಪ್ಯಾಕ್‌ಗಳು, ತುಪ್ಪ, ಜಾಮ್‌ಗಳ ಶೇಖರಿಸಿದ ಅಲ್ಯುಮೀನಿಯಂ ಕವರ್‌ಗಳು, ಉಪಯೋಗಿಸಿದ ಟ್ಯೂಬ್, ಶೇವಿಂಗ್ ಕ್ರೀಮ್ ಕ್ಯಾನ್‌ಗಳು, ಲೇದರ್, ರೇಕ್ಸಿನ್, ರಬ್ಬರ್, ಪೀಠೋಪಕರಣಗಳು, ಥರ್ಮಕೋಲ್ ಒಡೆದ ಆಟಿಕೆಗಳು, ಹಳೆಯ ಪೊರಕೆಗಳು, ಟಿನ್ ಬಾಟಲಿಗಳು, ಪೆಪ್ಸಿ ಕ್ಯಾನ್‌ಗಳು, ಬಿಸ್ಲೇರಿ ಬಾಟಲಿಗಳು, ಶೂ ಗಳು, ಒಳಗೆ ಬೆಳ್ಳಿ ಲೈನಿಂಗ್ ಕವರ್ಸ್ ಲೇಸ್ ಪ್ಯಾಕೆಟ್ಸ್ ,ನೆಲವರೆಸುವ ಕೋಲು ಮತ್ತು ಬಟ್ಟೆ, ಜೀರ್ಣಾವಸ್ಥೆಗೆ ತಲುಪಿದ ಕಾಲು ವರೆಸುವ ಮ್ಯಾಟ್‌ಗಳು, ಪಾಯಿಕಾನೆ ತೊಳೆಯಲು ಉಯೋಗಿಸಿದ ಬ್ರಶ್‌ಗಳು, ಸ್ಕ್ರಬ್ಬರ್‌ಗಳು, ಹಲ್ಲಿನ ಬ್ರಶ್‌ಗಳು ಮುಂತಾದವುಗಳು.

### ಮರುಬಳಕೆ ಮಾಡಬಹುದಾದ ತ್ಯಾಜ್ಯಗಳು

ಗೃಹೋಪಯೋಗಿ ಪ್ಲಾಸ್ಟಿಕ್ ವಸ್ತುಗಳು, ಹೊಸ ಪತ್ರಿಕೆ, ಹಳೆ ಪೋಸ್ಟ್‌ಗಳು, ಪತ್ರಿಕೆಯ ತುಂಡುಗಳು, ದಿನಸಿ ವಸ್ತುಗಳನ್ನು ಬಳಸಲು ಉಪಯೋಗಿಸುವ ಪ್ಲಾಸ್ಟಿಕ್ ಕವರ್‌ಗಳು, ಮಿನರಲ್ ವಾಟರ್ ಬಾಟಲಿಗಳು, ಒಡೆದ ಗ್ಲಾಸುಗಳು ಮುಂತಾದವುಗಳು.

**ಅನುಬಂಧ-3**

## ಗೃಹೋಪಯೋಗಿ ಅಪಾಯಕಾರಿ ತ್ಯಾಜ್ಯ

ಕೀಟ ನಾಶಕ ಬಾಟಲಿಗಳು, ಸೋಪ್‌ಗಳ ಹೊರ ಕವಚಗಳು, ರೇಜರ್/ರೇಜರ್ ಬ್ಲೇಡ್, ಕ್ರೇಡಿಟ್/ಡೆಬಿಟ್/ಲೋಯಲ್ಟಿ ಕಾರ್ಡ್, ಮ್ಯಾಗ್ನೇಟಿಕ್ ಸ್ಟ್ರಿಪ್, ಯಾವುದೇ ವೈದ್ಯಕೀಯ ನೈರ್ಮಲ್ಯಗಳಿಗೆ ಬಳಸಲಾಗುವ ಟಿಶ್ಯೂ ಪೇಪರ್‌ಗಳು, ಸೊಳ್ಳೆ ನಿವಾರಕ ದ್ರವ ಬಾಟಲಿಗಳು, ಮ್ಯಾಟ್‌ಗಳು, ಓಡೋನಿಲ್‌ಗಳು, ತುಟಿಗಳಿಗೆ ಹಚ್ಚುವ ಬಣ್ಣಗಳು, ಉಗುರುಗಳಿಗೆ ಹಚ್ಚುವ ಬಣ್ಣಗಳು, ಸೌಂದರ್ಯವರ್ಧಕಗಳು ಅವಧಿ ಮುಗಿದ ಔಷಧಿಗಳು ಮುಂತಾದವುಗಳು.

ತಂತಿಗಳ ತುಣುಕುಗಳು, ಹಳೆಯ ಎಲೆಕ್ಟ್ರಾನಿಕ್ ಭಾಗಗಳು, ಹಳೆ ಫೋನ್‌ಗಳು, ಅಡಾಪ್ಟರ್ಸ್, ಬ್ಲೂ ಟೂತ್ ಪರಿವರ್ತಕಗಳು, ಬ್ಯಾಟರಿಗಳು, ಸಿಡಿಗಳು, ಸಿ.ಎಫ್.ಎಲ್. ಟ್ಯೂಬ್ ಲೈಟ್‌ಗಳು, ಮುದ್ರಕ ಕ್ಯಾಟ್ರೇಜ್‌ಗಳು, ಹಾಳಾದ ಗಡಿಯಾರ, ಕೈ ಗಡಿಯಾರ, ಇಲೆಕ್ಟ್ರಾನಿಕ್ ವಸ್ತುಗಳು, ಹಾಳಾದ ಉಷ್ಣ ಮಾಪಕಗಳು ಮುಂತಾದ ಇ-ತ್ಯಾಜ್ಯಗಳು.

**ಅನುಬಂಧ-4**

## ತ್ಯಾಜ್ಯ ವಿಲೇವಾರಿ ವಿಧಾನಗಳು:

**1. ಕೊಳೆಯುವ ಅಥವಾ ಜೈವಿಕವಾಗಿ ವಿಘಟನೆ ಹೊಂದುವ ತ್ಯಾಜ್ಯಗಳು:**

ಪ್ರತಿಯೊಬ್ಬ ತ್ಯಾಜ್ಯ ಉತ್ಪಾದಕನು ತಮ್ಮಲ್ಲಿ ಉತ್ಪಾದನೆಯಾಗುವ ಕೊಳೆಯುವ ಅಥವಾ ಜೈವಿಕವಾಗಿ ವಿಘಟನೆ ಹೊಂದುವ ತ್ಯಾಜ್ಯವನ್ನು ಉತ್ಪಾದನಾ ಪ್ರಮಾಣಕ್ಕನುಸಾರವಾಗಿ ಸ್ವಂತನೆಲೆಯಲ್ಲಿ ಈ ಕೆಳಕಂಡ ವಿಧಾನಗಳನ್ನು ಅಥವಾ ಪುರಸಭೆಯು ಕಾಲಕಾಲಕ್ಕೆ ಸೂಚಿಸುವ ವಿಧಾನಗಳನ್ನು ಅನುಸರಿಸಿ ಗೊಬ್ಬರವನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು.

**ಅ. ಮನೆಗಳು:**

**ಸಣ್ಣ ಪಿಟ್ ಕಾಂಪೋಸ್ಟ್ ಮಾದರಿ:**

ಎರಡು ಫೀಟ್ ಉದ್ದ, ಎರಡು ಫೀಟ್ ಅಗಲ ಮತ್ತು ಎರಡು ಫೀಟ್ ಆಳದ ಎರಡು ಗುಂಡಿಗಳನ್ನು ತೋಡಿ ದಿನಂಪ್ರತಿ ಉತ್ಪಾದನೆಯಾಗುವ ಕೊಳೆಯುವ ಅಥವಾ ಜೈವಿಕವಾಗಿ ವಿಘಟನೆ ಹೊಂದುವ ತ್ಯಾಜ್ಯವನ್ನು ಸಣ್ಣದಾಗಿ ಕೊಚ್ಚಿ ಹಾಕಬೇಕು ಮತ್ತು ಅದರ ಮೇಲೆ ತೆಳುವಾಗಿ(ತ್ಯಾಜ್ಯ ಮುಚ್ಚುವ ರೀತಿಯಲ್ಲಿ, ಸರಿಸುಮಾರು 1 ಅಥವಾ 2 ಸೆಂಟೀ ಮೀಟರ್‌ನಷ್ಟು) ಮಣ್ಣನ್ನು ಹಾಕಬೇಕು. ಇದೇ ರೀತಿ ಹೊಂಡ ತುಂಬುವವರವಿಗೂ ಮುಂದುವರಿಸಬೇಕು, ಒಂದು ಹೊಂಡ ತುಂಬಲು ಸರಿ ಸುಮಾರು ಒಂದರಿಂದ ಒಂದೂವರೆ ತಿಂಗಳುಗಳ ಕಾಲ ಬೇಕಾಗುತ್ತದೆ. ನಂತರ ಎರಡನೇ ಹೊಂಡ ಉಪಯೋಗಿಸಲು ಪ್ರಾರಂಭಿಸಬೇಕು. ಎರಡನೇ ಹೊಂಡ ತುಂಬುವ ಹೊತ್ತಿಗೆ ಮೊದಲನೇ ಹೊಂಡದಲ್ಲಿ ತ್ಯಾಜ್ಯವು ಜೈವಿಕ ವಿಘಟನೆ ಹೊಂದಿ ಗೊಬ್ಬರವಾಗಿ ಮಾರ್ಪಾಡಾಗಿರುತ್ತದೆ. ಸದರಿ ಗೊಬ್ಬರವನ್ನು ಹೊರತೆಗೆದು ಮತ್ತೆ ಮೊದಲನೆಯ ಹೊಂಡವನ್ನು ಉಪಯೋಗಿಸಲು ಪ್ರಾರಂಭಿಸಬಹುದು.

**ಪೈಪ್ ಕಾಪೋಸ್ಟ್ ಮಾದರಿ:**

ಆರು ಅಥವಾ ಎಂಟು ಇಂಚು ಅಗಲದ ಆರು ಅಡಿ ಉದ್ದದ ಪಿ.ವಿ.ಸಿ ಅಥವಾ ಸೀಮೆಂಟ್ ಪೈಪನ್ನು ನೀರು ನಿಲ್ಲದ ಮಣ್ಣಿನಲ್ಲಿ ಒಂದು ಅಡಿಯಷ್ಟು ಹೊಂಡ ಮಾಡಿ ಲಂಬವಾಗಿ ಹೂಳುವುದು. ಭೂಮಿಯಿಂದ ನಾಲ್ಕು ಇಂಚುಗಳಷ್ಟು ಮೇಲೆ ತ್ಯಾಜ್ಯದಿಂದ ಉತ್ಪಾದನೆಯಾಗುವ ದ್ರವ ಹೊರಹೋಗಲು ಸಣ್ಣ ರಂಧ್ರಗಳನ್ನು ಪೈಪಿನ ಸುತ್ತಲೂ ಕೊರೆಯುವುದು. ನಂತರ ಮೊದಲಿಗೆ ಕಾಲು ಕೇ.ಜಿ ಯಷ್ಟು ಬೆಲ್ಲ ಮತ್ತು ಒಂದೂವರೆ ಕೇ.ಜಿ ಯಷ್ಟು ಆಕಳು ಅಥವಾ ಎಮ್ಮೆಯ ಸೆಗಣಿ ಹಾಕಿ ದಿನಂಪ್ರತಿ ಉತ್ಪಾದನೆಯಾಗುವ ಕೊಳೆಯುವ ಅಥವಾ ಜೈವಿಕವಾಗಿ ವಿಘಟನೆ ಹೊಂದುವ ತ್ಯಾಜ್ಯವನ್ನು ಸಣ್ಣದಾಗಿ ಕೊಚ್ಚಿ ಹಾಕಬೇಕು ಮತ್ತು ಅದರ ಮೇಲೆ ತೆಳುವಾಗಿ (ತ್ಯಾಜ್ಯ ಮುಚ್ಚುವ ರೀತಿಯಲ್ಲಿ, ಸರಿಸುಮಾರು 1 ಅಥವಾ 2 ಸೆಂಟೀ ಮೀಟರ್‌ನಷ್ಟು) ಮಣ್ಣನ್ನು ಹಾಕಬೇಕು ಮತ್ತು ಪೈಪ್ ಮೇಲ್ಭಾಗವನ್ನು ಮುಚ್ಚಬೇಕು, ಒಂದು ಪೈಪ್ ತುಂಬಲು ಸರಿ ಸುಮಾರು ಒಂದರಿಂದ ಒಂದೂವರೆ ತಿಂಗಳುಗಳ ಕಾಲ ಬೇಕಾಗುತ್ತದೆ. ನಂತರ ಎರಡನೇ ಪೈಪ್ ಉಪಯೋಗಿಸಲು ಪ್ರಾರಂಭಿಸಬೇಕು. ಎರಡನೇ ಪೈಪ್ ತುಂಬುವ ಹೊತ್ತಿಗೆ ಮೊದಲನೇ ಪೈಪ್‌ನಲ್ಲಿ ತ್ಯಾಜ್ಯವು ಜೈವಿಕ ವಿಘಟನೆ ಹೊಂದಿ ಗೊಬ್ಬರವಾಗಿ ಮಾರ್ಪಾಡಾಗಿರುತ್ತದೆ. ಸದರಿ ಗೊಬ್ಬರವನ್ನು ಹೊರತೆಗೆದು ಮತ್ತೆ ಮೊದಲನೆಯ ಪೈಪನ್ನು ಉಪಯೋಗಿಸಲು ಪ್ರಾರಂಭಿಸಬಹುದು.

**ಗಮನದಲ್ಲಿಸಬೇಕಾದ ಅಂಶಗಳು:** ನೀರು ನಿಲ್ಲುವ ಜಾಗದಲ್ಲಿ ಪೈಪ್ ಸ್ಥಾಪಿಸಬಾರದು, ಸಾರು, ಗಂಜಿ ಇತ್ಯಾದಿ ದ್ರವ ತ್ಯಾಜ್ಯವನ್ನು ಹಾಕಬಾರದು. ಸದರಿ ದ್ರವ ತ್ಯಾಜ್ಯಗಳನ್ನು ನೇರವಾಗಿ ಮರದ ಬುಡಕ್ಕೆ ಹಾಕಬಹುದು. ಪೈಪ್‌ನಲ್ಲಿ ತೇವಾಂಶ ಹೆಚ್ಚಾದಲ್ಲಿ ಮರದ

ಒಣ ಎಲೆ, ಬೂದಿಯನ್ನು ಹಾಕಬಹುದು ಮತ್ತು ಹೆಚ್ಚಿನ ಗುಣಮಟ್ಟದ ಗೊಬ್ಬರಕ್ಕಾಗಿ ವಾರಕೊಮ್ಮೆ ಒಂದು ಲೋಟ ಮಜ್ಜಿಗೆಯನ್ನು ಹಾಕಿದರೆ ಉತ್ತಮ.

**ಆ. ಬಹು ಮಹಡಿ ಮನೆಗಳು/ ವಸತಿ ಸಮುಚ್ಚಯಗಳು/ಹಾಸ್ಟೆಲ್/ಪೇಯಿಂಗ್ ಗೆಸ್ಟ್ ವಸತಿಗಳು/ಶಾಲಾ ಕಾಲೇಜು ಕ್ಯಾಂಟೀನ್ ಮುಂತಾದ ಹೆಚ್ಚಿನ ಪ್ರಮಾಣದ (ಕೊಳೆಯುವ ಅಥವಾ ಜೈವಿಕವಾಗಿ ವಿಘಟನೆ ಹೊಂದುವ) ತ್ಯಾಜ್ಯ ಉತ್ಪಾದಕರು:**

1. **ದೊಡ್ಡ ಪಿಟ್ ಕಾಂಪೋಸ್ಟ್ ಮಾದರಿ** : ಆರು ಫೀಟ್ ಉದ್ದ, ಎರಡು ಫೀಟ್ ಅಗಲ ಮತ್ತು ಎರಡು ಫೀಟ್ ಆಳದ

   ಅಗತ್ಯ ಸಂಖ್ಯೆಯ ಗುಂಡಿಗಳನ್ನು ತೋಡಿ ದಿನಂಪ್ರತಿ ಉತ್ಪಾದನೆಯಾಗುವ ಕೊಳೆಯುವ ಅಥವಾ ಜೈವಿಕವಾಗಿ ವಿಘಟನೆ ಹೊಂದುವ ತ್ಯಾಜ್ಯವನ್ನು ಸಣ್ಣದಾಗಿ ಕೊಚ್ಚಿ ಹಾಕಬೇಕು ಮತ್ತು ಅದರ ಮೇಲೆ ತೆಳುವಾಗಿ (ತ್ಯಾಜ್ಯ ಮುಚ್ಚುವ ರೀತಿಯಲ್ಲಿ, ಸರಿ ಸುಮಾರು 1 ಅಥವಾ 2 ಸೆಂಟೀ ಮೀಟರ್‌ನಷ್ಟು) ಮಣ್ಣನ್ನು ಹಾಕಬೇಕು. ಇದೇ ರೀತಿ ಹೊಂಡ ತುಂಬುವವರವಿಗೂ ಮುಂದುವರಿಸಬೇಕು. ನಂತರ ಎರಡನೇ ಹೊಂಡ ಉಪಯೋಗಿಸಲು ಪ್ರಾರಂಭಿಸಬೇಕು. ಇದೇ ರೀತಿ ಮುಂದುವರೆಸಬೇಕು ಹಾಗೂ ಮೊದಲನೇ ಹೊಂಡದಲ್ಲಿ ತ್ಯಾಜ್ಯವು 90 ದಿವಸಗಳಲ್ಲಿ ಜೈವಿಕ ವಿಘಟನೆ ಹೊಂದಿ ಗೊಬ್ಬರವಾಗಿ ಮಾರ್ಪಾಡಾಗಿರುತ್ತದೆ. ಸದರಿ ಗೊಬ್ಬರವನ್ನು ಹೊರ ತೆಗೆದು ಮತ್ತೆ ಮೊದಲನೆಯ ಹೊಂಡವನ್ನು ಉಪಯೋಗಿಸಲು ಪ್ರಾರಂಭಿಸಬಹುದು.

2. **ಎರೆಹುಳು ಗೊಬ್ಬರ ಮಾದರಿ**
3. **ಬಯೋಮೆಥನೇಶನ್ ಘಟಕಗಳ ಮಾದರಿ**
4. **ವಿಂಡ್ರೋ ಗೊಬ್ಬರ ಮಾದರಿ:**
5. **ಏರೋಬಿಕ್ ಮತ್ತು ಅನೇರೋಬಿಕ್ ಮಾದರಿ**

ಈ ಮೇಲಿನ ನಾಲ್ಕು ವಿಧಾನಗಳಿಗೆ ದಿನಂಪ್ರತಿ ಉತ್ಪಾದನೆಯಾಗುವ ಕೊಳೆಯುವ ಅಥವಾ ಜೈವಿಕವಾಗಿ ವಿಘಟನೆ ಹೊಂದುವ ತ್ಯಾಜ್ಯ ಪ್ರಮಾಣಕ್ಕನುಗುಣವಾಗಿ ಘಟಕಗಳನ್ನು ಮಾರುಕಟ್ಟೆಯಲ್ಲಿ ಲಭ್ಯವಿರುವ ವಿಷಯ ಪರಿಣಿತ ಸಮಾಲೋಚಕರ ಸಹಾಯ ಪಡೆದು ನಿರ್ಮಿಸಿಕೊಳ್ಳಬೇಕು. ಸದರಿ ವಿಷಯ ಪರಿಣಿತ ಸಮಾಲೋಚಕರ ವಿವರಗಳನ್ನು ಪುರಸಭೆಯಲ್ಲಿಯೂ ಸಹ ಪಡೆದುಕೊಳ್ಳಬಹುದು.

ಮೇಲಿನ ವಿಧಾನಗಳನ್ನು ಅನುಸರಿಸಿ ತ್ಯಾಜ್ಯ ಉತ್ಪಾದನಾ ಸ್ಥಳದಲ್ಲಿ ಗೊಬ್ಬರವನ್ನಾಗಿ ಪರಿವರ್ತಿಸುವ ಘಟಕಗಳನ್ನು ನಿರ್ಮಿಸಿಕೊಳ್ಳಲು ಸಾಧ್ಯವಿಲ್ಲದಿದ್ದಲ್ಲಿ ವಿಂಗಡಿಸಿದ ಕೊಳೆಯುವ ತ್ಯಾಜ್ಯವನ್ನು ಇತರ ತ್ಯಾಜ್ಯಗಳೊಂದಿಗೆ ಮಿಶ್ರಣ ಮಾಡದೆ ಹಾಗೂ ಯಾವುದೇ ಕಾರಣಕ್ಕೂ ಪ್ಲಾಸ್ಟಿಕ್ ಲಕೋಟೆಯಲ್ಲಿ ಹಾಕಿ ಕಟ್ಟಿ ನೀಡದೆ, ಮುಚ್ಚಳವಿರುವ ಪ್ಲಾಸ್ಟಿಕ್ ಬಕೆಟ್ ಯಾ ಇತರ ಲೋಹದ ಬಕೆಟ್‌ನಲ್ಲಿ ಶೇಖರಿಸಿಟ್ಟುಕೊಂಡು ಪುರಸಭೆಯ ತ್ಯಾಜ್ಯ ಸಂಗ್ರಹಣಾ ವಾಹನಕ್ಕೆ ನೀಡಬೇಕು.

2. **ಕೊಳೆಯದ ಅಥವಾ ಒಣ ಮತ್ತು ಮರುಬಳಕೆ ಮಾಡಬಹುದಾದ ತ್ಯಾಜ್ಯಗಳು :**

ಹಾಲು, ಮೊಸರಿನ ಪ್ಯಾಕ್‌ಗಳು, ಬೆಣ್ಣೆ ಕಟ್ಟಲು ಬಳಸಲಾಗುವ ಪೇಪರ್, ತುಪ್ಪ/ಎಣ್ಣೆ ಪ್ಯಾಕ್‌ಗಳು, ಎಣ್ಣೆ ಕ್ಯಾನುಗಳು, ಸುಗಂಧ ದ್ರವ್ಯದ ಹಾಗೂ ಶ್ಯಾಂಪು ಬಾಟಲಿಗಳು, ಟೆಟ್ರಾ ಪ್ಯಾಕ್‌ಗಳು, ತುಪ್ಪ, ಜಾಮ್‌ಗಳ ಶೇಖರಿಸಿದ ಅಲ್ಯುಮೀನಿಯಂ ಕವರ್‌ಗಳು, ಆಹಾರ ಪದಾರ್ಥಗಳ ಪ್ಯಾಕಿಂಗ್ ಕವರ್/ಕಂಟೈನರ್ ಮುಂತಾದವುಗಳನ್ನು ಚೆನ್ನಾಗಿ ತೊಳೆದು ಒಣಗಿಸಿ ಪ್ರತ್ಯೇಕವಾದ ಚೀಲದಲ್ಲಿ ಹಾಕಿಟ್ಟುಕೊಂಡು ಪುರಸಭೆಯ ಕಸ ಸಂಗ್ರಹಕ ವಾಹನಕ್ಕೆ ವಾರಕ್ಕೆ ಒಂದು ಬಾರಿ ನೀಡಿ.

ನೆಲವರೆಸುವ ಕೋಲು ಮತ್ತು ಬಟ್ಟೆ, ಜೀರ್ಣಾವಸ್ಥೆಗೆ ತಲುಪಿದ ಕಾಲು ವರೆಸುವ ಮ್ಯಾಟ್‌ಗಳು, ಪಾಯಿಖಾನೆ ತೊಳೆಯಲು ಉಪಯೋಗಿಸಿದ ಬ್ರಶ್‌ಗಳು, ಸ್ಕ್ರಬ್ಬರ್‌ಗಳು, ಹಲ್ಲಿನ ಬ್ರಶ್‌ಗಳು ಮುಂತಾದವುಗಳನ್ನು ಪ್ರತ್ಯೇಕವಾದ ಚೀಲದಲ್ಲಿ ಹಾಕಿಟ್ಟುಕೊಂಡು ಪುರಸಭೆಯ ಕಸ ಸಂಗ್ರಹಕ ವಾಹನಕ್ಕೆ ವಾರಕ್ಕೆ ಒಂದು ಬಾರಿ ನೀಡಿ.

ಉಪಯೋಗಿಸಿದ ಟ್ಯೂಬ್, ಶೇವಿಂಗ್ ಕ್ರೀಮ್ ಕ್ಯಾನ್‌ಗಳು, ಲೆದರ್, ರೇಕ್ಸಿನ್, ರಬ್ಬರ್, ಪೀಠೋಪಕರಣಗಳು, ಥರ್ಮಕೋಲ್, ಒಡೆದ ಆಟಿಕೆಗಳು, ಹಳೆಯ ಪೊರಕೆಗಳು, ಟಿನ್ ಬಾಟಲಿಗಳು, ಪೆಪ್ಸಿ ಕ್ಯಾನ್‌ಗಳು, ಬಿಸ್ಲೇರಿ ಬಾಟಲಿಗಳು, ಶೂ ಗಳು, ಒಳಗೆ ಬೆಳ್ಳಿ ಲೈನಿಂಗ್ ಕವರ್ಸ್, ಲೇಸ್ ಪ್ಯಾಕೆಟ್ಸ್ ಮುಂತಾದವುಗಳನ್ನು ಪ್ರತ್ಯೇಕವಾದ ಚೀಲದಲ್ಲಿ ಹಾಕಿಟ್ಟುಕೊಂಡು ಪುರಸಭೆಯ ಕಸ ಸಂಗ್ರಹಕ ವಾಹನಕ್ಕೆ ವಾರಕ್ಕೆ ಒಂದು ಬಾರಿ ನೀಡಿ.

**ಮರುಬಳಕೆ ಮಾಡಬಹುದಾದ ತ್ಯಾಜ್ಯಗಳು**

ಗೃಹೋಪಯೋಗಿ ಪ್ಲಾಸ್ಟಿಕ್ ವಸ್ತುಗಳು, ಹೊಸ ಪತ್ರಿಕೆ, ಹಳೆ ಪೋಸ್ಟ್‌ಗಳು, ಪತ್ರಿಕೆಯ ತುಂಡುಗಳು, ದಿನಸಿ ವಸ್ತುಗಳನ್ನು ಬಳಸಲು ಉಪಯೋಗಿಸುವ ಪ್ಲಾಸ್ಟಿಕ್ ಕವರ್‌ಗಳು, ಬಿಸ್ಲೇರಿ ಬಾಟಲಿಗಳು, ಒಡೆದ ಗ್ಲಾಸುಗಳು ಮುಂತಾದವುಗಳನ್ನು ಪ್ರತ್ಯೇಕವಾದ ಚೀಲದಲ್ಲಿ ಹಾಕಿಟ್ಟುಕೊಂಡು ಪುರಸಭೆಯ ಕಸ ಸಂಗ್ರಹಕ ವಾಹನಕ್ಕೆ ತಿಂಗಳಿಗೆ ಒಂದು ಬಾರಿ ನೀಡಿ ಅಥವಾ ನೇರವಾಗಿ ಗುಜುರಿ ಅಂಗಡಿಯವರಿಗೆ ನೀಡಿ.

**ಗೃಹೋಪಯೋಗಿ ಅಪಾಯಕಾರಿ ತ್ಯಾಜ್ಯ**

ಕೀಟ ನಾಶಕ ಬಾಟಲಿಗಳು, ಸೋಪ್‌ಗಳ ಹೊರ ಕವಚಗಳು, ರೇಜರ್/ರೇಜರ್ ಬ್ಲೇಡ್, ಕ್ರೆಡಿಟ್/ಡೆಬಿಟ್/ಲೋಯಲ್ಟಿ ಕಾರ್ಡ್, ಮ್ಯಾಗ್ನೇಟಿಕ್ ಸ್ಟ್ರೀಪ್, ಯಾವುದೇ ವೈದ್ಯಕೀಯ ನೈರ್ಮಲ್ಯಗಳಿಗೆ ಬಳಸಲಾಗುವ ಟಿಶ್ಯೂ ಪೇಪರ್‌ಗಳು, ಸೊಳ್ಳೆ ನಿವಾರಕ ದ್ರವ ಬಾಟಲಿಗಳು, ಮ್ಯಾಟ್‌ಗಳು, ಓಡೋನಿಲ್‌ಗಳು, ತುಟಿಗಳಿಗೆ ಹಚ್ಚುವ ಬಣ್ಣಗಳು, ಉಗುರುಗಳಿಗೆ ಹಚ್ಚುವ ಬಣ್ಣಗಳು, ಸೌಂದರ್ಯ ವರ್ಧಕಗಳು ಅವಧಿ ಮುಗಿದ ಔಷಧಿಗಳು ಮುಂತಾದವುಗಳು.

ತಂತಿಗಳ ತುಣುಕುಗಳು, ಹಳೆಯ ಎಲೆಕ್ಟ್ರಾನಿಕ್ ಭಾಗಗಳು, ಹಳೆ ಪೋನ್‌ಗಳು, ಅಡಾಪ್ಟರ್ಸ್, ಬ್ಲೂ ಟೂತ್ ಪರಿವರ್ತಕಗಳು, ಬ್ಯಾಟರಿಗಳು, ಸಿಡಿಗಳು, ಸಿ.ಎಫ್.ಎಲ್. ಟ್ಯೂಬ್ ಲೈಟ್‌ಗಳು, ಮುದ್ರಕ ಕ್ಯಾಟ್ರೇಜ್‌ಗಳು, ಹಾಳಾದ ಗಡಿಯಾರ, ಕೈ ಗಡಿಯಾರ, ಇಲೆಕ್ಟ್ರಾನಿಕ್ ವಸ್ತುಗಳು, ಹಾಳಾದ ಉಷ್ಣ ಮಾಪಕಗಳು ಮುಂತಾದ ಇ–ತ್ಯಾಜ್ಯಗಳು ಮುಂತಾದವುಗಳನ್ನು ಪ್ರತ್ಯೇಕವಾದ ಚೀಲದಲ್ಲಿ ಹಾಕಿಟ್ಟುಕೊಂಡು ಪುರಸಭೆಯ ಕಸ ಸಂಗ್ರಹಕ ವಾಹನಕ್ಕೆ ತಿಂಗಳಿಗೆ ಒಂದು ಬಾರಿ ನೀಡಿ.

**ಅನುಬಂಧ–5**

**ಮನೆಗಳಲ್ಲಿ ಉತ್ಪಾದನೆಯಾಗುವ ನೈರ್ಮಲ್ಯ/ವೈದ್ಯಕೀಯ ತ್ಯಾಜ್ಯ**

1. **ಮನೆಗಳು:**
ಉಪಯೋಗಿಸಿದ ಸ್ಯಾನಿಟರಿ ನ್ಯಾಪ್‌ಕಿನ್‌ಗಳು (ಸದ್ರಿ ಸ್ಯಾನಿಟರಿ ವಸ್ತುಗಳ ತಯಾರಕರು ಯಾ ಸದ್ರಿ ಬ್ರಾಂಡ್ ಮಾಲಿಕರು ನೀಡುವಂತಹ ಪೌಚ್ ಯಾ ಹಳೆಯ ದಿನಪತ್ರಿಕೆಯಲ್ಲಿ ಸುತ್ತಿ), ಒಳ ಉತ್ತರಕನ್ನಡನ ಬಟ್ಟೆ ಮುಂತಾದವುಗಳು, ಉಪಯೋಗಿಸಿದ ಕಾಂಡೋಂಗಳು, ಉಪಯೋಗಿಸಿದ ಸಿರೇಂಜ್‌ಗಳು, ಉಪಯೋಗಿಸಿದ ಹತ್ತಿ ಬ್ಯಾಂಡೇಜ್‌ಗಳು, ಯಾವುದೇ ತುಂಡು ಬಟ್ಟೆ, ರಕ್ತವಿರುವ ಕಾಗದ ಅಥವಾ ಯಾವುದೇ ಔಷಧಿಗಳು ಅಥವಾ ನೈರ್ಮಲ್ಯ ತ್ಯಾಜ್ಯಗಳು, ವೈದ್ಯಕೀಯ ನೈರ್ಮಲ್ಯಗಳಿಗೆ ಬಳಸಲಾಗುವ ಟಿಶ್ಯೂ ಪೆಪರ್‌ಗಳು ಮುಂತಾದವುಗಳನ್ನು ಪೇಪರ್‌ನಲ್ಲಿ ಸುತ್ತಿ ಮೇಲೆ ಕೆಂಪು ಶಾಯಿಯಿಂದ ದೊಡ್ಡದಾಗಿ (X) ಗುರುತು ಹಾಕಿ ಪ್ರತ್ಯೇಕವಾಗಿ ಪುರಸಭೆಯ ಕಸ ಸಂಗ್ರಹಕ ವಾಹನಕ್ಕೆ ನೀಡಿ.

2. **ವಸತಿ ಸಂಕೀರ್ಣ/ಹಾಸ್ಟಲ್/ಶೈಕ್ಷಣಿಕ ಸಂಸ್ಥೆ ಮುಂತಾದವುಗಳು :**
ವಸತಿ ಸಂಕೀರ್ಣ/ಹಾಸ್ಟಲ್/ಶೈಕ್ಷಣಿಕ ಸಂಸ್ಥೆ ಮುಂತಾದ ಹೆಚ್ಚಿನ ಪ್ರಮಾಣದ ನೈರ್ಮಲ್ಯ ತ್ಯಾಜ್ಯ ಉತ್ಪಾದಕರು ತಮ್ಮಲ್ಲಿಯೇ ನ್ಯಾಪ್‌ಕಿನ್ ಇನ್‌ಸಿನರೇಟರ್/ ನ್ಯಾಪ್‌ಕಿನ್ ಡೆಸ್ಟ್ರಾಯರ್‌ಗಳನ್ನು ಸ್ಥಾಪಿಸಿಕೊಂಡು ಅದರಿಂದ ಉತ್ಪಾದನೆಯಾಗುವ ಬೂದಿಯನ್ನು ಮಾತ್ರ ಪೇಪರ್‌ನಲ್ಲಿ ಸುತ್ತಿ ಮೇಲೆ ಕೆಂಪು ಶಾಯಿಯಿಂದ ದೊಡ್ಡದಾಗಿ (X) ಗುರುತು ಹಾಕಿ ಪ್ರತ್ಯೇಕವಾಗಿ ಪುರಸಭೆಯ ಕಸ ಸಂಗ್ರಹಕ ವಾಹನಕ್ಕೆ ನೀಡುವುದು.

**ಅನುಬಂಧ –6 (ದಂಡಗಳ ಅನುಬಂಧ)**

| ಕ್ರ.ಸಂ | ಉಪಕಾನೂನು ಸಂಖ್ಯೆ | ಉಪಕಾನೂನಿನ ವಿವರಣೆ | ಉಪಕಾನೂನನ್ನು ಉಲ್ಲಂಘಿಸಿದಲ್ಲಿ ಅನ್ವಯಿಸುವ ದಂಡದ ಪ್ರಮಾಣ |
|---|---|---|---|
| 01 | 1 | ಸಾರ್ವಜನಿಕ ಸಭೆ/ ಕಾರ್ಯಕ್ರಮಗಳು ನಡೆದ ಪ್ರದೇಶ ಸ್ವಚ್ಛಗೊಳಿಸದಿದ್ದಲ್ಲಿ | ಸ್ವಚ್ಛತಾ ಠೇವಣಿಯನ್ನು ಮುಟ್ಟುಗೋಲು ಹಾಕುವುದು ಹಾಗೂ ರೂ. 2,000/– ದಿಂದ 10,000/– ವರೆಗೆ ದಂಡ |
| 02 | 2 | ಮೀನು ಕೋಳಿ ಮತ್ತು ಮಾಂಸದ ತ್ಯಾಜ್ಯವನ್ನು ನಿಗದಿಪಡಿಸಿದಂತೆ ಬೇರ್ಪಡಿಸದೆ ಸಾರ್ವಜನಿಕ ಪ್ರದೇಶಗಳಲ್ಲಿ ವಿಲೇವಾರಿ ಮಾಡುವುದು (ಮನೆಯ ತ್ಯಾಜ್ಯ ಹೊರತುಪಡಿಸಿ) | ಪ್ರತಿ ಅಪರಾಧಕ್ಕೆ ರೂ. 2000/– ರಿಂದ 5000/– |
| 03 | 3 | ಜಾಗೆಯ ಮಾಲೀಕರು ತಮ್ಮ ಒಡೆತನದ ಜಾಗೆಯನ್ನು ಸ್ವಚ್ಛವಾಗಿಟ್ಟುಕೊಳ್ಳದೇ ಕಸ ಕಡ್ಡಿ ಉಂಟಾಗುವುದು/ಕಳೆ ಬೆಳೆಯುವುದು/ ನೀರು ನಿಲ್ಲುವುದು ಇತ್ಯಾದಿಗಳಿಂದ ತೊಂದರೆ ಉಂಟುಮಾಡುವುದು | 1ನೇ ಬಾರಿ – ರೂ. 500/–<br>2ನೇ ಬಾರಿ – ರೂ. 2000/–<br>3ನೇ ಬಾರಿ – ದ್ವಿಗುಣ ಮತ್ತು ಮುಂದುವರೆಯುತ್ತದೆ. (ಜಾಗೆಯನ್ನು ಪುರಸಭೆಯಿಂದ ಸ್ವಚ್ಛಗೊಳಿಸಿದ್ದಲ್ಲಿ |

| | | | |
|---|---|---|---|
| 04 | 4 | ಸ್ಯಾನಿಟರಿ/ವೈದ್ಯಕೀಯ ತ್ಯಾಜ್ಯ ವಿಲೇವಾರಿ | ಎ) ಒಬ್ಬ ವ್ಯಕ್ತಿ/ ಒಂದು ಮನೆ<br>1ನೇ ಬಾರಿ – ರೂ. 100/-<br>2ನೇ ಬಾರಿ – ರೂ. 200/-<br>3ನೇ ಬಾರಿ –ದ್ವಿಗುಣ ಮತ್ತು ಮುಂದುವರೆಯುತ್ತದೆ.<br>ಬಿ) ದೊಡ್ಡ ಪ್ರಮಾಣದ ತ್ಯಾಜ್ಯ ಉತ್ಪಾದಕರು<br>1ನೇ ಬಾರಿ – ರೂ.1000<br>2ನೇ ಬಾರಿ – ರೂ. 2000<br>3ನೇ ಬಾರಿ – ದ್ವಿಗುಣ ಮತ್ತು ಮುಂದುವರೆಯುತ್ತದೆ |
| 05 | 5 | ಘನತ್ಯಾಜ್ಯ ವಿಲೇವಾರಿ ಶುಲ್ಕ<br>(ಸ್ವಚ್ಛ ಭಾರತ ಮಿಶನ್ ಅಡಿಯಲ್ಲಿ ತಯಾರಿಸಿದ ಘನತ್ಯಾಜ್ಯ ವಿಲೇವಾರಿ ಕ್ರೀಯಾ ಯೋಜನಾ ವರದಿ 2018 ಮಾರ್ಚ್‌ರ ಅನ್ವಯ ನಿರ್ಧರಿಸಿದೆ) | ಈ ಕೆಳಗೆ ಲಗತ್ತಿಸಿದೆ. |

| Sl. No. | Particulars | User Charges / month<br>(As per SBM SWM DPR March 2018, Considering yearly 15% increase ) |
|---|---|---|
| 1 | Households Slum | 20 |
| 2 | Households Non slum - Big | 50 |
| 3 | Households Non slum - small | 30 |
| 4 | Commercials - Big | 200 |
| 5 | Commercials - Small | 150 |
| 6 | Meat & Chicken Shop | 200 |
| 7 | Markets | As per yearly auction |
| 8 | Institutions | 250 |
| 9 | Hotels – Big | 300 |
| 10 | Hotels - Small | 200 |
| 11 | Cinema Theatres | 500 |
| 12 | Marriage Halls | 850 |
| 13 | Hospitals | 300 |
| 14 | Lodges | 500 |
| 15 | Bakery | 500 |
| 16 | Street Vendors | 90 |

| | | |
|---|---|---|
| | | (or daily Rs 3) |

ಅಂತಿಮವಾಗಿ ಚರ್ಚಿಸಿದ ಸಭೆಯು ಸ್ವಚ್ಚ ಭಾರತ ಮಿಷನ್ ಎಸ್.ಡ್ಲ್ಯೂ.ಎಮ್ ಡಿ.ಪಿ.ಆರ್.ಗೆ ಮಂಜೂರಾತಿ ನೀಡುವುದರೊಂದಿಗೆ ಸದರಿ ಡಿಪಿಆರ್ ನಂತೆ ರೂಪಿಸಲಾದ ಘನತ್ಯಾಜ್ಯ ವಿಲೇವಾರಿ ಬೈಲಾವನ್ನು ಕುಮಟಾ ಪುರಸಭೆಯಲ್ಲಿ ಅಳವಡಿಸಲು ಸರ್ವಾನುಮತದಿಂದ ಮಂಜೂರಿ ನೀಡಿ ಠರಾಯಿಸಲಾಯಿತು.